ಆ) ಯೋಜನಾ ಕಾಮಗಾರಿಯು ಪ್ರಗತಿಯಲ್ಲಿದ್ದು ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ.

ಇ) ಖಾಸಗಿ ಜಮೀನನ್ನು ಭೂಸ್ವಾಧೀನಗೊಳಿಸಿ ನೈಸ್ ಸಂಸ್ಥೆಗೆ ಹಸ್ತಾಂತರಿಸುವುದು, ಸರ್ಕಾರಿ ಜಮೀನನ್ನು ಲೀಸ್/ ಸೇಲ್‌ನಂತೆ ನೈಸ್ ಸಂಸ್ಥೆಗೆ ಹಸ್ತಾಂತರಿಸುವುದು ಸೇರಿದಂತೆ ಫ್ರೇಮ್‌ವರ್ಕ ಒಪ್ಪಂದದ ಕಂಡಿಕೆಗಳಂತೆ ಸರ್ಕಾರದ ವತಿಯಿಂದ ನೈಸ್ ಸಂಸ್ಥೆಗೆ ನೆರವನ್ನು ನೀಡಲಾಗುತ್ತಿದೆ.

ಈ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ20–04–2006 ರಂದು ಆದೇಶ ನೀಡಿ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ದಿನಾಂಕ 03–05–2005 ಅನ್ನು ಎತ್ತಿ ಹಿಡಿದು ಆದೇಶ ನೀಡಿರುತ್ತದೆ. ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ 03–05–2005 ರಂದು ನೀಡಿರುವ ಆದೇಶದಲ್ಲಿ ಯೋಜನೆಯನ್ನು ಮೂಲತಃ ಯೋಜಿಸಿದಂತೆ ಮತ್ತು ಹಿಂದಿನ ಶ್ರೀ ಸೋಮಶೇಖರ ರೆಡ್ಡಿಯವರ ದಾವೆಯ ತೀರ್ಪಿನಂತೆ ನಿರ್ವಹಿಸಲು ಹಾಗೂ ಫ್ರೇಂವರ್ಕ್ ಒಪ್ಪಂದವನ್ನು ಕಾರ್ಯಗತಗೊಳಿಸಲು ಆದೇಶಿಸಿರುತ್ತದೆ.

ಉ) ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಲು ಸರ್ಕಾರವು ಬದ್ಧವಾಗಿರುತ್ತದೆ. ಅದರಂತೆ ಕ್ರಮಕೈಗೊಳ್ಳಲು ಸಹಕರಿಸುವಂತೆ ನೈಸ್ ಸಂಸ್ಥೆಗೆ ತಿಳಿಸಲಾಗಿದೆ.

ಊ) ಈ ವಿಷಯದಲ್ಲಿ ಸರ್ಕಾರದ ವತಿಯಿಂದ ಯಾವುದೇ ವಿಳಂಬ ಆಗಿರುವುದಿಲ್ಲ.

1474 (2081) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ನಗರ ನೀರು ಸರಬರಾಜು ಯೋಜನೆಯಿಂದ ಈ ಮೊದಲು ಸವದತ್ತಿ ಮಲಪ್ರಭಾ ಜಲಾಶಯದಿಂದ ಹುಬ್ಬಳ್ಳಿ ಧಾರವಾಡ ಅವಳಿ ನಗರಗಳಿಗೆ ಕುಡಿಯುವ ನೀರು ಸರಬರಾಜು ಮಾಡುತ್ತಿದ್ದು ಈಗ ಅಮ್ಮಿನಭಾವಿಗೆ ಹಸ್ತಾಂತರಿಸಿದ್ದರಿಂದ ಸವದತ್ತಿ ನಗರದಲ್ಲಿ (ಯಲ್ಲಮ್ಮ ಗುಡ್ಡಕ್ಕೆ ಹೋಗುವ ದಾರಿಯಲ್ಲೆ) ನಿರ್ಮಿಸಿದ ಎಲ್ಲ ಕಟ್ಟಡಗಳನ್ನು ಯಾರೂ ಉಪಯೋಗ ಮಾಡದೇ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಕಟ್ಟಡಗಳನ್ನು ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಯಲ್ಲಮ್ಮಗುಡ್ಡಕ್ಕೆ ವಹಿಸಿಕೊಟ್ಟರೆ ಯಾತ್ರಿಕರಿಗೆ ಅನುಕೂಲವಾಗುವುದು ನಿಜವಲ್ಲವೇ;

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ಬಂದಿರುತ್ತದೆ.

ಸವದತ್ತಿ ನಗರದಲ್ಲಿ (ಯಲ್ಲಮ್ಮ ಗುಡ್ಡಕ್ಕೆ ಹೋಗುವ ದಾರಿಯಲ್ಲಿ) ನಿರ್ಮಿಸಿದ ಒಟ್ಟು 49 ವಸತಿ ಗೃಹಗಳಲ್ಲಿ ಹಾಲಿ 24 ರಲ್ಲಿ ಮಂಡಳಿಯ ಸಿಬ್ಬಂದಿ ವಾಸವಾಗಿರುತ್ತಾರೆ. ಉಳಿದ 25 ವಸತಿ ಗೃಹಗಳು ಖಾಲಿ ಇರುತ್ತವೆ.

ಆ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

1476 (2086) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) :- ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ತಾಲ್ಲೂಕಿನ ಯಾಣ ಕ್ಷೇತ್ರವು ಪಶ್ಚಿಮ ಘಟ್ಟದ ಸೆರಗಿನಲ್ಲಿದ್ದು ಪ್ರಕೃತಿಯ ರಮ್ಯ ತಾಣವೂ, ಪುರಾಣ ಪ್ರಸಿದ್ಧ ಸ್ಥಳವೂ ಆಗಿದ್ದು, ಅತ್ಯುತ್ತಮ ಪ್ರವಾಸಿ ತಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಪ್ರವಾಸಿಗರಿಗೆ ಉತ್ತಮ ಸೌಲಭ್ಯ ಒದಗಿಸಿ ಅಭಿವೃದ್ಧಿ ಪಡಿಸಲು ಸರ್ಕಾರ ಯೋಚಿಸಿದೆಯೇ;

ಇ) ರೆಸಾರ್ಟ್, ಮಾದರಿಯಲ್ಲಿ ಇದನ್ನು ಅಭಿವೃದ್ಧಿ ಪಡಿಸಿ, ರಸ್ತೆ ಸಂಪರ್ಕವನ್ನು ಅಭಿವೃದ್ಧಿಪಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :